| |
|---|
| **Deposition Sheets (RP.No.57)** <br> **Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 536/2024**

ಪಿ.ಡಬ್ಲ್ಯು : 9 ಸಿ.ಡಬ್ಲ್ಯು : 9

ಸಾಕ್ಷಿದಾರಳ ಹೆಸರು : ಜಯಂತಿ ನಾಯಕ್
ಗಂಡನ ಹೆಸರು : ವೆಂಕಟ ನಾಯಕ್
ಪ್ರಾಯ : 53 ವರ್ಷ
ಉದ್ಯೋಗ : ದೈಹಿಕ ಶಿಕ್ಷಕಿ
ವಾಸ : ಅಂಕೋಲ

ದಿನಾಂಕ 05-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರು:-

ನಾನು ಪ್ರಯಾಣಿಸುತ್ತಿದ್ದ ಬಸ್ಸಿನ ಚಾಲಕನಾದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಆರೋಪಿಯನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಚಾಸಾ-1 ರಿಂದ 4, ಚಾಸಾ-8, ಚಾಸಾ-10 ಹಾಗೂ 11 ರವರ ಪರಿಚಯ ಇದೆ. ಚಾಸಾ-1 ನನ್ನ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕರು. ಚಾಸಾ-2, 3 ಮತ್ತು 4 ವಿದ್ಯಾರ್ಥಿಗಳು, ಚಾಸಾ- 8, ಚಾಸಾ-10 ಹಾಗೂ 11 ರವರು ನನ್ನ ಸಹೋದ್ಯೋಗಿಗಳು.

ದಿ: 19-12-2023 ರಂದು ನಾವು ಎರಡು ದಿನಗಳ ಶಾಲಾ ಶೈಕ್ಷಣಿಕ ಪ್ರವಾಸಕ್ಕೆಂದು ಕೆ.ಎಸ್.ಆರ್.ಟಿ.ಸಿ. ಬಸ್ಸು ನಂಬರ್ ಕೆಎ-31-ಎಸ್-1595 ರಲ್ಲಿ ಹಾರವಾಡ ಅಂಕೋಲದಿಂದ ಹೊರಟು ಉಡುಪಿಗೆ ಬಂದಿರುತ್ತೇವೆ. ಉಡುಪಿಯಿಂದ ಮಲ್ಪೆ ಬೀಚಿಗೆ ಹೋಗಿ ಅಲ್ಲಿಂದ

ಕಾರ್ಕಳಕ್ಕೆ ಸಂಜೆ ಸುಮಾರಿಗೆ ಬಂದಿರುತ್ತೇವೆ. ಅಲ್ಲಿಂದ ವಾಪಾಸು ಉಡುಪಿಗೆ ಬಂದು ತಂಗುತ್ತೇವೆ. ಮರುದಿನ ಅಂದರೆ ದಿಃ 20-12-2023 ರಂದು ಬೆಳಿಗ್ಗೆ ನಾವು ಶೃಂಗೇರಿಗೆ ಹೋಗಿ ಅಲ್ಲಿಂದ ಹೊರನಾಡಿಗೆ ಹೋಗಿ ಅಲ್ಲಿಂದ ಕುದುರೆಮುಖ ಮಾರ್ಗವಾಗಿ ಅಂಕೋಲಕ್ಕೆ ವಾಪಾಸ್ಸು ಹೋಗುತ್ತಿರುವಾಗ ಸುಮಾರು ಸಂಜೆ 5.15 ಕ್ಕೆ ಮಾಳದಲ್ಲಿ ನಾವು ಪ್ರಯಾಣಿಸುತ್ತಿದ್ದ ಬಸ್ಸು ಮರಕ್ಕೆ ಡಿಕ್ಕಿ ಪಡಿಸಿರುತ್ತದೆ. ಆ ಸಮಯದಲ್ಲಿ ನಾನುನಿದ್ದೆ ಕಣ್ಣಿನಲ್ಲಿದ್ದು, ಅಪಘಾತ ಹೇಗೆ ಸಂಭವಿಸಿತು ಎಂದು ಗೊತ್ತಾಗಿರುವುದಿಲ್ಲ. ಎಚ್ಚರಗೊಂಡು ನೋಡಿದ ನಂತರ ಚಾಸಾ-2 ರಿಂದ 4 ವಿದ್ಯಾರ್ಥಿಗಳಿಗೆ ಸದಾ ಸ್ವರೂಪದ ಗಾಯವಾಗಿರುತ್ತದೆ. ಬಸ್ಸು ಸ್ವಲ್ಪ ಮಟ್ಟಿಗೆ ಜಖಂ ಆಗಿರುತ್ತದೆ. ನಂತರ ನಾನು ಗಾಯಾಳು ವಿದ್ಯಾರ್ಥಿಗಳನ್ನು ಒಂದು ರಿಕ್ಷಾದಲ್ಲಿ ಕಾರ್ಕಳ ಸರ್ಕಾರಿ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಿರುತ್ತೇನೆ. ಘಟನೆ ಕುರಿತು ನಾನು ಹೇಳಿಕೆ ನೀಡಿರುತ್ತೇನೆ.

ಕೆ.ಎಸ್.ಆರ್.ಟಿ.ಸಿ. ಬಸ್ಸನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಬಸ್ಸು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-2 ರಿಂದ 5 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು</u> ಃ <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ನಾವು ಪ್ರಯಾಣಿಸುತ್ತಿದ್ದ ಕೆ.ಎಸ್.ಆರ್.ಟಿ.ಸಿ. ಬಸ್ಸು ಚಾಲಕ ನಾದ ಆರೋಪಿ ಬಸ್ಸನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ರಸ್ತೆಯ ತೀರಾ ಬಲಭಾಗಕ್ಕೆ ಚಲಾಯಿಸಿಕೊಂಡು ಹೋಗಿ, ರಸ್ತೆಯ ಪಕ್ಕದ ಮರಕ್ಕೆ ಡಿಕ್ಕಿಪಡಿಸಿರುವುದು ಅಪಘಾತಕ್ಕೆ ಕಾರಣವಾಗಿರುತ್ತದೆ ಎಂದರೆ ನನಗೆ ಹೇಳಲು ಬರುವುದಿಲ್ಲ. ಈ ಕುರಿತು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ದಿಃ **21-12-2023** ರಂದು ಪೋಲಿಸರ ಮುಂದೆ ನೀಡಿದ ಹೇಳಿಕೆಯ ಭಾಗವನ್ನು ನಿಪಿ-12 ಎಂದು

ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿತರ ಪರ : ಶ್ರೀ ಹೆಚ್.ಆರ್.ಕೆ. ವಕೀಲರಿಂದ :: ಏನು ಇಲ್ಲ.

ಮರುವಿಚಾರಣೆ :: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ